# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 896

ಸದಸ್ಯರ ಹೆಸರು : ಶ್ರೀ. ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 17/12/2024

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆಗಳು ಎಷ್ಟು; ಅವುಗಳ ಪೈಕಿ ಹೊಸದಾಗಿ ರಚನೆಯಾದ ಸ್ಥಳೀಯ ಸಂಸ್ಥೆಗಳು ಎಷ್ಟು ಮತ್ತು ಯಾವುವು (ತಾಲೂಕುವಾರು ಮಾಹಿತಿ ನೀಡುವುದು);</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ನಗರ ಸ್ಥಳೀಯ ಸಂಸ್ಥೆ</th><th>ದಕ್ಷಿಣ ಕನ್ನಡ ಜಿಲ್ಲೆ</th><th>ಉಡುಪಿ ಜಿಲ್ಲೆ</th></tr>
<tr><td>ನಗರಸಭೆ</td><td>2</td><td>1</td></tr>
<tr><td>ಪುರಸಭೆ</td><td>3</td><td>3</td></tr>
<tr><td>ಪಟ್ಟಣ ಪಂಚಾಯಿತಿ</td><td>8</td><td>2</td></tr>
<tr><td>ಒಟ್ಟು</td><td>13</td><td>6</td></tr>
</table>
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಬ, ಬಜಪೆ ಮತ್ತು ಕಿನ್ನಿಗೋಳಿ ಪಟ್ಟಣ ಪಂಚಾಯಿತಿಗಳನ್ನು ಹೊಸದಾಗಿ ರಚನೆ ಮಾಡಲಾಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಬೈಂದೂರು ಪಟ್ಟಣ ಪಂಚಾಯಿತಿಯನ್ನು ಹೊಸದಾಗಿ ರಚನೆ ಮಾಡಲಾಗಿರುತ್ತದೆ.<br><br>ಸಂಪೂರ್ಣ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.</td></tr>
<tr><td>ಆ</td><td>ಹೊಸದಾಗಿ ರಚನೆಯಾದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗಿದೆಯೇ; ಇಲ್ಲದಿದ್ದಲ್ಲಿ ಈವರೆಗೂ ಚುನಾವಣೆ ನಡೆಸದಿರಲು ಕಾರಣವೇನು ಮತ್ತು ಯಾವಾಗ ಚುನಾವಣೆಯನ್ನು</td><td>ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಬಜಪೆ ಮತ್ತು ಕಿನ್ನಿಗೋಳಿ ಪಟ್ಟಣ ಪಂಚಾಯಿತಿಗಳಲ್ಲಿ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ರವರು ಕ್ಷೇತ್ರ ಪುನರ್ ವಿಂಗಡಣೆ ಮಾಡಿ, ದಿನಾಂಕ:07/02/2022, ದಿನಾಂಕ:18/03/2022 ಮತ್ತು ದಿನಾಂಕ:10/02/2022 ರಂದು</td></tr>
</table>

| | | |
|---|---|---|
| | ನಡೆಸಲಾಗುವುದು (ಮಾಹಿತಿಯನ್ನು ನೀಡುವುದು)? | (ಕ್ರಮವಾಗಿ) ಅಂತಿಮ ಅಧಿಸೂಚನೆ ರಾಜ್ಯಪತ್ರದಲ್ಲಿ ಪ್ರಕಟಿಸಿರುತ್ತಾರೆ.<br><br>ಉಡುಪಿ ಜಿಲ್ಲೆಯಲ್ಲಿ ಬೈಂದೂರು ಪಟ್ಟಣ ಪಂಚಾಯಿತಿಯಲ್ಲಿ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ರವರು ಕ್ಷೇತ್ರ ಪುನರ್ ವಿಂಗಡಣೆ ಮಾಡಿ ದಿನಾಂಕ:13/04/2022 ರಂದು ಅಂತಿಮ ಅಧಿಸೂಚನೆ ರಾಜ್ಯಪತ್ರದಲ್ಲಿ ಪ್ರಕಟಿಸಿರುತ್ತಾರೆ.<br><br>ಈ ಮಧ್ಯೆ ವಿವಿಧ ಪ್ರವರ್ಗಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಕುರಿತು ನಿಗದಿಪಡಿಸಬೇಕಾದ ಮೀಸಲಾತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ರಚಿಸಲಾಗಿದ್ದ ನ್ಯಾಯಮೂರ್ತಿ ಕೆ ಭಕ್ತವತ್ಸಲ ಅಧ್ಯಕ್ಷತೆಯ ಆಯೋಗದ ವರದಿಯನ್ನು ನಿರೀಕ್ಷಿಸಿ, ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆಯನ್ನು ಬಾಕಿ ಇಡಲಾಗಿತ್ತು. ಆಯೋಗವು ಇದುವರೆಗೆ ಅನುಸರಿಸಿರುವಂತೆ ಹಿಂದುಳಿದ ವರ್ಗಗಳಿಗೆ 33% ರ ಮೀಸಲಾತಿ ಪ್ರಮಾಣವನ್ನು ಮುಂದುವರೆಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಸದರಿ ಆಯೋಗವು ನಗರಾಭಿವೃದ್ಧಿ ಇಲಾಖೆಯ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಭಾಗವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನಕ್ಕೆ ತರುವಂತೆ ಶಿಫಾರಸ್ಸು ಮಾಡಿದ್ದರಿಂದ, ಈ ಕುರಿತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮುಂದಿನ ಕ್ರಮವನ್ನು ನಿರೀಕ್ಷಿಸಲಾಗಿತ್ತು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ:ಹಿಂವಕ 114 ಬಿಸಿಎ 2022(ಭಾಗ-6); ದಿನಾಂಕ:06/07/2024 ರಲ್ಲಿ ಈ ಕೆಳಕಂಡಂತೆ ಆದೇಶವಾಗಿರುತ್ತದೆ:<br>1. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 114 ಬಿಸಿಎ 2022 (ಭಾಗ-1); |

| | | |
|---|---|---|
| | | ದಿನಾಂಕ:04/11/2023 ರಲ್ಲಿ ಜಾರಿಗೊಳಿಸಿರುವ 03 ಶಿಫಾರಸ್ಸುಗಳ ಪೈಕಿ To bring all Urban Local Bodies Election wing under the control of DPAR ಎಂಬ ಶಿಫಾರಸ್ಸನ್ನು ಕೈಬಿಡಲಾಗಿದೆ;<br>2. ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಚುನಾವಣಾ ಘಟಕಗಳನ್ನು ಆಯಾ ಇಲಾಖೆಗಳ ನಿಯಂತ್ರಣದಲ್ಲಿ ಉಳಿಸಿ, ಪ್ರಸ್ತುತ ಚಾಲ್ತಿಯಲ್ಲಿರುವ ವ್ಯವಸ್ಥೆಯನ್ನು ಮುಂದುವರೆಸಲಾಗಿದೆ.<br><br>ಮೇಲೆ ತಿಳಿಸಿರುವ ಕಾರಣದಿಂದಾಗಿ ಹೊಸದಾಗಿ ಮೇಲ್ದರ್ಜೆಗೇರಿಸಲಾದ ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ವಿವಿಧ ಪ್ರವರ್ಗಗಳ ಮೀಸಲಾತಿ ನಿಗದಿಪಡಿಸಲು ಕಾಲಾವಕಾಶ ತಗುಲಿರುತ್ತದೆ. ಪ್ರಸ್ತುತ ಈ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಲು ಕ್ರಮವಹಿಸಲಾಗುತ್ತಿದೆ. ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿದ ನಂತರ, ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಲಾಗುತ್ತದೆ. |

ಸಂಖ್ಯೆ:ನಅಇ 73 ಎಲ್‌ಸಿಕ್ಯೂ 2024.

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

ಅನುಬಂಧ-1

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿರುವ ನಗರ ಸ್ಥಳೀಯ ಸಂಸ್ಥೆ ವಿವರ

| ಕ್ರ ಸಂ. | ಜಿಲ್ಲೆಯ ಹೆಸರು | ತಾಲ್ಲೂಕು ಹೆಸರು | ನಗರ ಸ್ಥಳೀಯ ಸಂಸ್ಥೆ ವಿವರ | ಪುರಸಭೆ |
|---|---|---|---|---|
| 1 | ದಕ್ಷಿಣ ಕನ್ನಡ | ಉಳ್ಳಾಲ | ಉಳ್ಳಾಲ | ನಗರಸಭೆ |
| | | ಪುತ್ತೂರು | ಪುತ್ತೂರು | ನಗರಸಭೆ |
| | | ಬಂಟ್ವಾಳ | ಬಂಟ್ವಾಳ | ಪುರಸಭೆ |
| | | ಮೂಡುಬಿದರೆ | ಮೂಡುಬಿದರೆ | ಪುರಸಭೆ |
| | | ಉಳ್ಳಾಲ | ಸೋಮೇಶ್ವರ | ಪುರಸಭೆ |
| | | ಬೆಳ್ತಂಗಡಿ | ಬೆಳ್ತಂಗಡಿ | ಪಟ್ಟಣ ಪಂಚಾಯಿತಿ |
| | | ಸುಳ್ಯ | ಸುಳ್ಯ | ಪಟ್ಟಣ ಪಂಚಾಯಿತಿ |
| | | ಮುಲ್ಕಿ | ಮುಲ್ಕಿ | ಪಟ್ಟಣ ಪಂಚಾಯಿತಿ |
| | | ಬಂಟ್ವಾಳ | ವಿಟ್ಲ | ಪಟ್ಟಣ ಪಂಚಾಯಿತಿ |
| | | ಉಳ್ಳಾಲ | ಕೋಟೆಕಾರು | ಪಟ್ಟಣ ಪಂಚಾಯಿತಿ |
| | | ಕಡಬ | ಕಡಬ | ಪಟ್ಟಣ ಪಂಚಾಯಿತಿ |
| | | ಮೂಡುಬಿದರೆ | ಬಜಪೆ | ಪಟ್ಟಣ ಪಂಚಾಯಿತಿ |
| | | ಮೂಡುಬಿದರೆ | ಕಿನ್ನಿಗೋಳಿ | ಪಟ್ಟಣ ಪಂಚಾಯಿತಿ |
| 2 | ಉಡುಪಿ | ಉಡುಪಿ | ಉಡುಪಿ | ನಗರಸಭೆ |
| | | ಕಾರ್ಕಳ | ಕಾರ್ಕಳ | ಪುರಸಭೆ |
| | | ಕುಂದಾಪುರ | ಕುಂದಾಪುರ | ಪುರಸಭೆ |
| | | ಕಾಪು | ಕಾಪು | ಪುರಸಭೆ |
| | | ಬ್ರಹ್ಮಾವರ | ಸಾಲಿಗ್ರಾಮ | ಪಟ್ಟಣ ಪಂಚಾಯಿತಿ |
| | | ಬೈಂದೂರು | ಬೈಂದೂರು | ಪಟ್ಟಣ ಪಂಚಾಯಿತಿ |

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾದ ನಗರ ಸ್ಥಳೀಯ ಸಂಸ್ಥೆ ವಿವರ

| ಕ್ರ ಸಂ. | ಜಿಲ್ಲೆಯ ಹೆಸರು | ತಾಲ್ಲೂಕು ಹೆಸರು | ನಗರ ಸ್ಥಳೀಯ ಸಂಸ್ಥೆ ವಿವರ | ಪುರಸಭೆ |
|---|---|---|---|---|
| 1 | ದಕ್ಷಿಣ ಕನ್ನಡ | ಕಡಬ | ಕಡಬ | ಪಟ್ಟಣ ಪಂಚಾಯಿತಿ |
| | | ಮೂಡುಬಿದರೆ | ಬಜಪೆ | ಪಟ್ಟಣ ಪಂಚಾಯಿತಿ |
| | | ಮೂಡುಬಿದರೆ | ಕಿನ್ನಿಗೋಳಿ | ಪಟ್ಟಣ ಪಂಚಾಯಿತಿ |
| 2 | ಉಡುಪಿ | ಬೈಂದೂರು | ಬೈಂದೂರು | ಪಟ್ಟಣ ಪಂಚಾಯಿತಿ |